# ಆತ್ಮಾವಲೋಕನದಲ್ಲಿ ವಿಕ್ರಂ



ಸಾಮಾಜಿಕ ಜಾಲತಾಣದಲ್ಲಿ ಈಚೆಗೆ ವಿಕ್ರಂ ರವಿಚಂದ್ರನ್ ಚಿತ್ರವೊಂದನ್ನು ಹಂಚಿಕೊಂಡಿದ್ದು, ಅದರಲ್ಲಿ ನಟ ರವಿಚಂದ್ರನ್ ಹಾಗೂ ವಿಕ್ರಂ ರವಿಚಂದ್ರನ್ ಇಬ್ಬರೂ ತ್ರಿನೇತ್ರಧಾರಿಗಳಾಗಿ ಕಾಣಿಸಿಕೊಂಡಿದ್ದಾರೆ. ತಂದೆ–ಮಗ ಒಟ್ಟಾಗಿ ಸಿನಿಮಾ ಮಾಡುವ ಸೂಚನೆಯಾಗಿ ಈ ಚಿತ್ರವನ್ನು ಹಂಚಿಕೊಂಡಿದ್ದು, ತಮ್ಮ ತಂದೆ ರವಿಚಂದ್ರನ್ ನಿರ್ದೇಶನದ ಸಿನಿಮಾದಲ್ಲಿ ನಟಿಸುತ್ತಿರುವುದು ತಮಗೆ ರೋಮಾಂಚನಕಾರಿ ಸಂಗತಿ ಎಂದಿದ್ದಾರೆ.

ಈ ಕುರಿತು ಮತ್ತಷ್ಟು ಮಾಹಿತಿ ನೀಡಿರುವ ಅವರು, ‘ಸೋಷಿಯಲ್ ಮೀಡಿಯಾದಲ್ಲಿ ಟ್ರೆಂಡ್ ಆಗುವ ಒಂದು ಹೆಸರಾಗಿ ಮಾತ್ರ ಉಳಿಯಲು ನನಗೆ ಇಷ್ಟವಿಲ್ಲ. ನಾನು, ನನ್ನ ತಂದೆ ಒಟ್ಟಿಗೆ ಸಿನಿಮಾ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ. ನನ್ನ ತಂದೆ ನಿರ್ದೇಶನ ಮಾಡುತ್ತಿದ್ದು, ಅವರ ನಿರ್ದೇಶನಕ್ಕೆ ತಕ್ಕಂತೆ ನಾನು ನಟಿಸಬೇಕಿದೆ. ಅದಕ್ಕೆ ತಯಾರಿ ನಡೆಯುತ್ತಿದೆ. ಈ ಬಾರಿ ಸಂಪೂರ್ಣ ಭಿನ್ನವಾಗಿ ತೆರೆ ಮೇಲೆ ಬರುತ್ತೇವೆ’ ಎಂದು ಹೇಳಿದ್ದಾರೆ.

‘ನನ್ನ ಮೊದಲ ಸಿನಿಮಾ ಬಿಡುಗಡೆಯಾದ ನಂತರ ಸಿನಿಮಾ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದೆ, ನನ್ನ ತಂದೆಯೊಂದಿಗೆ ಈ ಕುರಿತು ಚರ್ಚೆ ಮಾಡಿದೆ. ಆ ಮಾತು ನನ್ನಿಡೀ ದೃಷ್ಟಿಕೋನವನ್ನೇ ಬದಲಾಯಿಸಿತು. ಸಿನಿಮಾ ಮೇಕಿಂಗ್‌ನಲ್ಲಿ ಕ್ರಾಂತಿ ತಂದವರು ನನ್ನ ತಂದೆ. ಅವರ ಮಗನಾಗಿ ಆ ಪರಂಪರೆಯನ್ನು ಮುಂದೆ ತೆಗೆದುಕೊಂಡು ಹೋಗಬೇಕಾಗಿರುವುದು ನನ್ನ ಜವಾಬ್ದಾರಿ. ನನ್ನ ಮೊದಲ ಸಿನಿಮಾದಲ್ಲಿ ಮಾಡಿದ ತಪ್ಪಿನಿಂದ ಅರಿತುಕೊಳ್ಳದೇ ಹೋದರೆ, ನಾನು ಕಲಾವಿದನಾಗಿ ಅಥವಾ ನಟನಾಗಿ ಬೆಳೆಯಲು ಸಾಧ್ಯವಿಲ್ಲ ಅಥವಾ ನನ್ನ ತಂದೆ ಗಳಿಸಿದ ಹೆಸರಿಗೆ ತಕ್ಕಂತೆ ಇರಲು ಸಾಧ್ಯವಾಗುವುದಿಲ್ಲ’ ಎಂದು ಮಾತನಾಡಿದ್ದಾರೆ.

‘‘ಸಿನಿಮಾ ಗೆದ್ದಾಗ ನಟರು ಹೇಗೆ ಖುಷಿಪಡುತ್ತಾರೋ ಸೋತಾಗ ಅದರ ಹೊಣೆಯನ್ನೂ ಹೊರಬೇಕು. ನನ್ನ ಮೊದಲ ಸಿನಿಮಾ ‘ತ್ರಿವಿಕ್ರಮ’ದಲ್ಲಿ ನಟನಾಗಿ ನನಗೆ ಮೆಚ್ಚುಗೆ ಬಂತು. ಆದರೆ ಸಿನಿಮಾ ನಿರೀಕ್ಷಿಸಿದಷ್ಟು ಯಶಸ್ಸು ಪಡೆಯಲಿಲ್ಲ. ಹಾಗೆಂದು ಸೋಲಿನಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಮೊದಲು, ಪ್ರೇಕ್ಷಕರು ಬಂದು ನನ್ನ ಸಿನಿಮಾ ನೋಡಬೇಕು ಎಂದು ಕಾಯುತ್ತಿದ್ದೆ. ಆದರೆ ನೋಡಲು ಒಂದು ಕಾರಣವನ್ನು ನಾನು ನೀಡಬೇಕು ಎಂಬುದನ್ನು ಈಗ ಅರಿತುಕೊಂಡಿದ್ದೇನೆ’’ ಎಂದು ಹೇಳಿದ್ದಾರೆ.



# ರಚೇಲ್

## ಮಲೆಯಾಳಿ ಆಗಿದ್ದರೂ ಹೆಮ್ಮೆಯ ಕನ್ನಡತಿ

‘ಲವ್ ಮಾಕ್ಟೇಲ್ 2’ ಚಿತ್ರದ ಮೂಲಕ ಕನ್ನಡ ಸಿನಿಮಾರಂಗದಲ್ಲಿ ಗುರುತಿಸಿಕೊಂಡಿರುವ ನಟಿ ರಚೇಲ್ ಡೇವಿಡ್, ‘ಅನ್‌ಲಾಕ್ ರಾಘವ’, ‘ಶೆಫ್ ಚಿದಂಬರ’, ‘ಭುವನಂ ಗಗನಂ’ ಸಿನಿಮಾಗಳಲ್ಲಿ ಈಚೆಗೆ ಕಾಣಿಸಿಕೊಂಡಿದ್ದಾರೆ. ಕನ್ನಡದೊಂದಿಗೆ ಮಲೆಯಾಳಂ ಸಿನಿಮಾರಂಗದಲ್ಲಿಯೂ ಬ್ಯುಸಿಯಾಗಿದ್ದು, ಮಲೆಯಾಳಂನಲ್ಲಿ ಸದ್ಯ ಆರನೇ ಪ್ರಾಜೆಕ್ಟ್‌ಗೆ ಸಹಿ ಹಾಕಿದ್ದಾರೆ.

ಕನ್ನಡ ಹಾಗೂ ಮಲೆಯಾಳಂ ಭಾಷೆಯ ಕೆಲವು ಸಿನಿಮಾಗಳಲ್ಲಿ ನಟಿಸುತ್ತಿದ್ದು, ಎರಡೂ ಸಿನಿಮಾರಂಗಗಳನ್ನು ಪ್ರತಿನಿಧಿಸಲು ಬಹಳ ಖುಷಿಯಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ರಚೇಲ್ ತಮ್ಮ ಕರಿಯರ್ ಆರಂಭಿಸಿದ್ದು ಮಲೆಯಾಳಂ ಸಿನಿಮಾರಂಗದಿಂದ. ‘ಲವ್ ಮಾಕ್ಟೇಲ್ 2’ ಸಿನಿಮಾ ಯಶಸ್ಸಿನ ನಂತರ ಕನ್ನಡ ಸಿನಿಮಾರಂಗದಲ್ಲಿ ಹಲವು ಅವಕಾಶಗಳು ಬಂದವು. ಆ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಲೇ ತಮ್ಮ ಕರಿಯರ್ ರೂಪಿಸಿಕೊಳ್ಳುತ್ತಿದ್ದಾರೆ ಅವರು.

‘ನಾನು ಎರಡೂ ಸಿನಿಮಾರಂಗಗಳನ್ನು ಬ್ಯಾಲೆನ್ಸ್ ಮಾಡುತ್ತಿದ್ದೇನೆ. ಅತಿ ದೊಡ್ಡ ಪ್ರೇಕ್ಷಕ ಬಳಗವನ್ನು ಸೆಳೆಯಲು ಎರಡು ಭಿನ್ನ ಸಿನಿಮಾರಂಗದಲ್ಲಿ ತೊಡಗಿಕೊಳ್ಳುವುದು ನಟರಾದವರಿಗೆ ಸವಾಲು. ನನಗೆ ಮಲೆಯಾಳಂ ಸಿನಿಮಾರಂಗ ತವರು. ನಾನು ಮಲೆಯಾಳಿ ಆಗಿದ್ದರೂ ಹೆಮ್ಮೆಯ ಕನ್ನಡತಿಯೂ ಹೌದು. ಏಕೆಂದರೆ ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಎರಡು ಸಿನಿಮಾರಂಗದಲ್ಲಿ ತೊಡಗಿಕೊಂಡಿರುವುದು ವಿಶಿಷ್ಟ ಅನುಭವ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.